ಸಾಕ್ಷಿಯನ್ನು ದಿಃ 05.02.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಕೆ.ಎನ್.ಎಸ್ ರವರಿಂದಃ

ನಿಪಿ-1 ಅಸಿಂದು ಎಂದರೆ ಸರಿಯಲ್ಲ. ಚೆಕ್ ಹಾಕುವ ಸಮಯದಲ್ಲಿ ವಿಜಯಬ್ಯಾಂಕ್ ಇರಲಿಲ್ಲ ಎಂದರೆ ಸರಿಯಲ್ಲ. ವಿಜಯಾ ಬ್ಯಾಂಕ್ ಬ್ಯಾಂಕ್ ಆಫ್ ಬರೋಡದೊಂದಿಗೆ ವಿಲೀನವಾದ ಬಗ್ಗೆ ಒಂದು ನಡಾವಳಿಯನ್ನು ಹೊರಡಿಸಿದ್ದು ಅದರಂತೆ ಯಾವುದಾದರೂ ಚೆಕ್ಕುಗಳಿದ್ದಲ್ಲಿ ಅದನ್ನು ಮರಳಿ ನೀಡಬೇಕು ಎಂದು ಪ್ರಕಟಿಸಿರುತ್ತಾರೆ ಎಂದರೆ ಸಾಕ್ಷಿ ಅದು ಆರೋಪಿಗೆ ಗೊತ್ತಿರುತ್ತದೆ ಅದು ನಮಗೆ ತಿಳಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-7 ರ ಮೂಲ ದಾಖಲೆ ನನ್ನ ಬಳಿ ಇದೆ. ಅದನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರ ಸರಿ. ನಿಪಿ-7 ರಲ್ಲಿ ತಿದ್ದಪಡಿ ಆಗಿದೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ವರ್ಷ ಖಾಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ-8 ರ ಮೇಲ್ಭಾಗದಲ್ಲಿ ಬರೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ನನಗೆ ಯಾವುದೇ ಪರವಾನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಾಗರದ ನಗರದಲ್ಲಿ ಮಾತ್ರ ಲೇವಾ ದೇವಿ ಮಾಡಲು ಪರವಾನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಿವಮೊಗ್ಗ ಜಿಲ್ಲಾದ್ಯಂತ ಮಾಡಬಹುದು ಎಂದು ಉತ್ತರಿಸುತ್ತಾರೆ. ಈ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ವಕೀಲರ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ- 8 ಪ್ರಕಾರ 2021 ರಿಂದ 2026 ರವರೆಗೆ ನನಗೆ ಪರವಾನಿಗೆ ಇದೆ. ಸಾಕ್ಷಿ ಮುಂದುವರೆದು ಅವರು ಅದೇ ರೀತಿ ಬರೆದುಕೊಡುತ್ತಾರೆ ಎಂದು ನುಡಿಯುತ್ತಾರೆ. ನಿಪಿ-8 ಅಧಿಕೃತ ಪರವಾನಿಗೆ ಅಲ್ಲ ಅದು ಸೃಷ್ಟಿಮಾಡಿದ ದಾಖಲೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ 6.4.2021 ಎಂದು ಬರೆದಿರುವುದು ತಿದ್ದುಪಡಿ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿ ದಾಖಲೆಗಳನ್ನು ಹಾಜರುಪಡಿಸಲು ಬಾವು ಇರುವುದಿಲ್ಲ. ಆರೋಪಿ ಯಾವುದೇ ಹಣವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆಸರಿಯಲ್ಲ.

ಆರೋಪಿಯ ಸಾಲಕ್ಕೆ ಸಂಬಧಪಟ್ಟಂತೆ ಖಾತೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿಪಿ-10 ಮತ್ತು 11 ಅನ್ನು ಈ ಬಗ್ಗೆ ಹಾಜರುಪಡಿಸಿರುತ್ತೇನೆ. ಆರೋಪಿಗೆ ಯಾವುದೇ ಸಾಲವನ್ನು ನೀಡದೇ ಇದ್ದರೂ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆಸರಿಯಲ್ಲ.

<u>ಮರುವಿಚಾರಣೆ ಇಲ್ಲ .</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

**ಓದಿ ಹೇಳಿ ಕೇಳಿ ಸರಿ ಇದೆ**

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.